ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣವನ್ನು ಕ್ರೀಡಾ ಚಟುವಟಿಕೆಗಳು ಇಲ್ಲದ ಸಂದರ್ಭದಲ್ಲಿ ಮಾತ್ರ ವಿವಿಧ ವಸ್ತು ಪ್ರದರ್ಶನ ಹಾಗೂ ಇತರ ಕಾರ್ಯಕ್ರಮಗಳನ್ನು ನಡೆಸಲು ಬಾಡಿಗೆ ನೀಡಲಾಗುತ್ತಿದೆ.

ಆ) 1) 2001-02ನೇ ಸಾಲಿನಲ್ಲಿ 112 ದಿನಗಳಿಗೆ ಬಾಡಿಗೆಗೆ ನೀಡಿದ್ದು, ರೂ. 1,39,27,000-00 ಗಳಷ್ಟು ವರಮಾನ ಬಂದಿದೆ.

2) 2002-03ನೇ ಸಾಲಿನಲ್ಲಿ 139 ದಿನಗಳಿಗೆ ಬಾಡಿಗೆಗೆ ನೀಡಿದ್ದು ರೂ. 1,88,56,733-00 ಗಳಷ್ಟು ವರಮಾನ ಬಂದಿದೆ.

ಇ) ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣ 82 ದಿನಗಳು 148 ದಿನಗಳು
ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದ
ಹೊರಭಾಗದಲ್ಲಿರುವ ಅಂಕಣಗಳು 146 ದಿನಗಳು 58 ದಿನಗಳು
ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ 45 ದಿನಗಳು 71 ದಿನಗಳು

ಈ) 42.00 ಲಕ್ಷ ರೂ. ಗಳು

ಉ) ಪ್ರತಿ ದಿನ ಕ್ರೀಡಾ ತರಬೇತಿಯನ್ನು ನಡೆಸಲು ಅನುವು ಮಾಡಿಕೊಡಲಾಗಿದೆ ಹಾಗೂ ತರಬೇತಿಗಾಗಿ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಕ್ರೀಡಾ ಪಟುಗಳಿಗೆ ಸಹಾಯಕವಾಗಲು ಕ್ರೀಡಾ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ನುರಿತ ವೈದ್ಯರನ್ನು ಸಹ ನೇಮಿಸಲಾಗಿದೆ. ಕಂಠೀರವ ಕ್ರೀಡಾಂಗಣ ಸಂಕೀರ್ಣದಲ್ಲಿ ವಿವಿಧ ಕ್ರೀಡಾ ಅಂಕಣಗಳನ್ನು ನಿರ್ಮಿಸಲಾಗಿದೆ.

17 ಕ್ರೀಡಾ ತರಬೇತುದಾರರು ತರಬೇತಿ ನೀಡುತ್ತಿದ್ದಾರೆ. ವಾಲಿಬಾಲ್, ಟೆನ್ನಿಸ್, ಬ್ಯಾಸ್ಕೆಟ್‌ಬಾಲ್ ಕ್ರೀಡಾ ಅಂಕಣಗಳಲ್ಲಿ ಚಟುವಟಿಕೆಗಳು ಪ್ರತಿ ನಿತ್ಯ ನಡೆಯುತ್ತಿವೆ.

ಇದಲ್ಲದೆ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾಂಗಣಗಳನ್ನು ಉಚಿತವಾಗಿ ಆದ್ಯತೆ ಮೇರೆಗೆ ಒದಗಿಸಲಾಗುತ್ತಿದೆ. ಮತ್ತು ಕ್ರೀಡಾ ಚಟುವಟಿಕೆಗಳಿಗೆ ಅವಶ್ಯವಿರುವ ಕ್ರೀಡಾ ಸಾಮಗ್ರಿಗಳನ್ನು ಸಹ ಉಚಿತವಾಗಿ ಒದಗಿಸಲಾಗುತ್ತಿದೆ. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿವಿಧ ರಾಜ್ಯ ಮತ್ತು ಜಿಲ್ಲೆಗಳಿಂದ ಬರುವ ಕ್ರೀಡಾ ಪಟುಗಳಿಗೆ ಅತೀ ಕಡಿಮೆ ದರದಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತಿದೆ.

ರಾಜ್ಯ ಯೋಜನಾ ಆಯೋಗದ ಕಾರ್ಯಕ್ರಮಗಳು

2258 (2572) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯೋಜನಾ ಆಯೋಗವನ್ನು ಯಾವಾಗ ಪುನರಚಿಸಲಾಯಿತು; ಆಯೋಗದ ಸದಸ್ಯರುಗಳ ವಿವರ ನೀಡುವುದು;

ಆ) ಇಲ್ಲಿಯವರೆಗೆ ಈ ಆಯೋಗ ಎಷ್ಟು ಬಾರಿ ಸಭೆ ಸೇರಿದೆ ಹಾಗೂ ಇದಕ್ಕಾಗಿ ಖರ್ಚಾದ ಹಣವೆಷ್ಟು;

ಇ) ಈ ಆಯೋಗವು ಇಲ್ಲಿಯವರೆಗೆ ಕೈಗೊಂಡ ಕಾರ್ಯಕ್ರಮಗಳ ವಿವರ ನೀಡುವುದು;

ಈ) ಈ ಆಯೋಗವು ಇಲ್ಲಿಯವರೆಗೆ ಸರ್ಕಾರಕ್ಕೆ ನೀಡಿದ ವರದಿಗಳ ವಿವರ ನೀಡುವುದು;

ಉ) ಈ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪಿಕೊಂಡಿದೆಯೇ ವಿವರ ನೀಡುವುದು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಅ) ಶ್ರೀ ಜಯರಾಂ ರಮೇಶ್ ಇವರನ್ನು ಉಪಾಧ್ಯಕ್ಷರನ್ನಾಗಿ ಮಾಡುವ ಮೂಲಕ ರಾಜ್ಯ ಯೋಜನಾ ಮಂಡಳಿಯನ್ನು ದಿನಾಂಕ 12-04-2000 ರಿಂದ ಪುನರ್ರಚಿಸಲಾಯಿತು, ನಂತರ ಶ್ರೀ ಜಯರಾಂ ರಮೇಶ್‌ರವರು ಮಂಡಳಿಯ ಉಪಾಧ್ಯಕ್ಷರ ಹುದ್ದೆಗೆ ರಾಜೀನಾಮೆ ನೀಡಿದ್ದ ಪ್ರಯುಕ್ತ ದಿನಾಂಕ 1-7-2002ರಲ್ಲಿ ಸದರಿ ಹುದ್ದೆಗೆ ಮಾಜಿ ರಾಜ್ಯ ಸಭಾ ಸದಸ್ಯರಾದ ಶ್ರೀ ಹೆಚ್. ಹನುಮಂತಪ್ಪ ಇವರನ್ನು ನೇಮಿಸಲಾಗಿದೆ. ಪುನರ್ರಚಿತ ರಾಜ್ಯ ಯೋಜನಾ ಮಂಡಳಿಯ ಸದಸ್ಯರುಗಳ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) 21 ಸಭೆಗಳನ್ನು ನಡೆಸಿದೆ ಮತ್ತು ವಿವಿಧ ಇಲಾಖಾ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದೆ. ಇದಕ್ಕಾಗಿ ಒಟ್ಟು 1.82 ಲಕ್ಷ ರೂಪಾಯಿಗಳು ಖರ್ಚಾಗಿರುತ್ತವೆ.

ಇ) 12-04-2000 ರಿಂದ ಇಲ್ಲಿಯವರೆಗೆ ಮಂಡಳಿಯು ರಾಜ್ಯದ ವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವಲ್ಲಿ ಇಲಾಖೆಗಳಿಗೆ ಸಲಹೆಗಳನ್ನು ನೀಡುವುದರ ಜೊತೆಗೆ, ವಿವಿಧ ಇಲಾಖೆಗಳ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪುನರ್ವಿಲೋಕನ ಮಾಡಿರುತ್ತದೆ.

ಈ) ಯಾವುದೇ ವರದಿಗಳನ್ನು ಸರ್ಕಾರಕ್ಕೆ ನೀಡಿರುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ರಾಜ್ಯ ಯೋಜನಾ ಮಂಡಳಿಯ ಸದಸ್ಯರ ಹೆಸರುಗಳು

1.	ಕರ್ನಾಟಕ ಸರ್ಕಾರದ ಮುಖ್ಯ ಮಂತ್ರಿಗಳು	ಅಧ್ಯಕ್ಷರು
2.	ಶ್ರೀ ಹೆಚ್. ಹನುಮಂತಪ್ಪ, ಮಾಜಿ ರಾಜ್ಯ ಸಭಾ ಸದಸ್ಯರು	ಉಪಾಧ್ಯಕ್ಷರು
3.	ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ	ಸದಸ್ಯರು
4.	ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	ಸದಸ್ಯರು
5.	ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು	ಸದಸ್ಯರು
6.	ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಹಾಗೂ ಕೃಷಿ ಉತ್ಪಾದನಾ ಆಯುಕ್ತರು	ಸದಸ್ಯರು
7.	ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ	ಸದಸ್ಯರು
8.	ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯರು
9.	ಡಾ: ಎನ್.ಕೆ. ತಿಂಗಳಾಯ ಮಾಜಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಸಿಂಡಿಕೇಟ್ ಬ್ಯಾಂಕ್, ಮಂಗಳೂರು	ಸದಸ್ಯರು

10. ಡಾ: ಅಬ್ದುಲ್ ಅಜೀಜ್ ನಿವೃತ್ತ ಪ್ರೊಫೆಸರ್, ಅರ್ಥಶಾಸ್ತ್ರ ವಿಭಾಗ, ಇನ್ಸಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಛೇಂಜ್ ಬೆಂಗಳೂರು — ಸದಸ್ಯರು
11. ಪ್ರೊ. ಕೆ. ಮೋಹನ್, ನಿವೃತ್ತ ಉಪ ನಿರ್ದೇಶಕರು, ಎನ್‌ಎಎಲ್, ಬೆಂಗಳೂರು — ಸದಸ್ಯರು
12. ಡಾ: ಎಂ. ಮುನಿಯಮ್ಮ ಗುಲ್ಬರ್ಗಾ ವಿಶ್ವ ವಿದ್ಯಾನಿಲಯದ ಮಾಜಿ ಉಪಕುಲಪತಿಗಳು, ಬೆಂಗಳೂರು
13. ಡಾ: ವಿ.ಎಚ್. ರೇಖಾರಾನಿ, ಪ್ರೊಫೆಸರ್, ಅರ್ಥಶಾಸ್ತ್ರ ವಿಭಾಗ, ಕ್ರೈಸ್ಟ್ ಕಾಲೇಜ್, ಬೆಂಗಳೂರು — ಸದಸ್ಯರು
14. ಡಾ: ಕೆ. ಪುಟ್ಟಸ್ವಾಮಯ್ಯ, ಅರ್ಥಶಾಸ್ತ್ರಜ್ಞರು, ಬೆಂಗಳೂರು — ಸದಸ್ಯರು
15. ಕರ್ನಾಟಕ ಸರ್ಕಾರ ಉಪ ಕಾರ್ಯದರ್ಶಿಗಳು ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ — ಸದಸ್ಯ-ಕಾರ್ಯದರ್ಶಿ

ಬೆಂಗಳೂರು ನಗರದಲ್ಲಿ ಹಮ್ಮಿಕೊಂಡ ಕ್ರೀಡಾ ಚಟುವಟಿಕೆಗಳು

2259 (2573) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಕೈಗೊಂಡ ಕಾರ್ಯಕ್ರಮಗಳು ಯಾವುವು ಹಾಗೂ ಇವುಗಳಿಗೆ ಖರ್ಚು ಮಾಡಿದ ಹಣವೆಷ್ಟು;

ಆ) ಬೆಂಗಳೂರು ನಗರದಲ್ಲಿ ಹೊಸದಾಗಿ ಈಜುಕೊಳ, ಸ್ಟೇಡಿಯಂ, ಆಟದ ಮೈದಾನಗಳ ಅಭಿವೃದ್ಧಿಗಾಗಿ ಮೇಲ್ಕಂಡ ಸಾಲಿನಲ್ಲಿ ಕೈಗೊಂಡ ಕ್ರಮಗಳೇನು;

ಇ) 2002-03ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹಾಗೂ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳ ವಿವರ ನೀಡುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು)

ಅ) ಅನುಬಂಧದಲ್ಲಿ ಒದಗಿಸಿದೆ.

ಆ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖಾ ವತಿಯಿಂದ ಈಜುಕೊಳ ನಿರ್ಮಿಸುವ ಯೋಜನೆ ಇರುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕು ಟಿ. ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ರೂ. 48.0 ಲಕ್ಷ ಅಂದಾಜು ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಆಟದ ಮೈದಾನದ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ 7 ಶಾಲೆಗಳಿಗೆ ತಲಾ ರೂ. 10.000 ಗಳಂತೆ ಒಟ್ಟು ರೂ. 70.000 ಅನುದಾನ ನೀಡಲಾಗಿದೆ.

ಇ) ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ.